Registered Number M. 1299. SATYAVADI (Founded 1917) Every Evening

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 28 ಸಂಚಿಕೆ 290] ಮಂಗಳವಾರ 21—8—45 [3 ಪೈ

ವೃತ್ತಾಂತ ಸಂಗ್ರಹ

ಇದೇ 24 ನುತ್ತು 25 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಚುನಾವಣೆ ನಡೆಯುವುದು.

ಂ ಂ

ನಿನ್ನೆಯ ದಿವಸ ಪುಥ್ಯಾಹ್ನ ಗೋರಿಬಿದನೂರಿನಲ್ಲಿ ಶ್ರೀ ಎಚ್. ಸಿ. ತಿಮ್ಮಾರೆಡ್ಡಿರವರ ದಸ್ಗಿರಿಯಾಗಿರುವುದಾಗಿ ತಿಳಿಯಬಂದಿದೆ.

ಂ ಂ

ಸಾಲಮ್ಮ ಎಂಬ ಯುವತಿ ಬೆಂಗಳೂರು ರಿಲ್ವೆಸ್ಟೇಷನ್ನಲ್ಲಿ ಗುಡ್ಸಿನ ಅಡಿಯಲ್ಲಿ ಕುಳಿತಿದ್ದಾಗ ಇಂಜನ್ ಗುಡ್ಸಿಗೆ ತಗುಲಿದ ಕಾರಣ ಗುಡ್ಸ್ ಆಕೆಯಮೇಲೆ ಹರಿದಕಾರಣ ಆಸ್ಪತ್ರೆಯಲ್ಲಿ ಸತ್ತಳು.

ಂ ಂ

ತಿರುಮಲೆ ತಾತಾಚಾರ್ಯ ಶರ್ಮರು ಅನಿಮಿಯ ನಿಮಿತ್ತ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲ್ಪಟ್ಟರು.

ಂ ಂ

ಬಾಬು ಸುಭಾಷಚಂದ್ರ ಬೋಸರವರನ್ನು ಭಾರತ ಸರ್ಕಾರದ ವಶಕ್ಕೆ ಒಪ್ಪಿಸಲಾಗುವುದು ಎಂಬುದಾಗಿ ಭಾರತ ಸರ್ಕಾರದ ಕಛೇರಿ ಹೇಳಿದೆ. ಇನ್ನೊಂದು ಸಿದ್ಧಿಯ ಪ್ರಕಾರ ಸುಭಾಷರು ರಷ್ಯಾಕ್ಕೆ ಮಾತ್ರ ಶರಣಾಗುವರೆಂತಲೂ ತಿಳಿಯಬಂದಿದೆ.

ಂ ಂ

ಭಾರತ ಕಾಂಗ್ರೆಸಿನ ಮೇಲಿನ ಪ್ರತಿಬಂಧಕಾಜ್ಞೆಗಳನ್ನು ಈ ವಾರದಲ್ಲಿ ರದ್ದು ಮಾಡುವುದಾಗಿ ಗೊತ್ತಾಗಿದೆ.

ಂ ಂ

ಲಕ್ನೋವಿನ ದುರ್ಗಾ ದೇವಿಗೆ ಕಾರ್ಯಾರ್ಥವಾಗಿ ಬೆಂಕಿಬಿದ್ದು ಸ್ತ್ರೀಯರಿಬ್ಬರು ಬೆಂದು ಸತ್ತರು.

ಂ ಂ

ಪಂಜಾಬ್ ಮೇಲ್ ಉರುಳಿದ ಪ್ರಕರಣದಲ್ಲಿ ನಾಲ್ವರಿಗೆ ಗಲ್ಲಿನ ಶಿಕ್ಷೆಯನ್ನು ವಿಧಿಸಲಾಗಿದೆ.

ಅಣುಬಾಂಬುಗಳು

ಇವುಗಳಲ್ಲಿ ಸೇರಿರುವ ಮುಖ್ಯವಾದ ಪದಾರ್ಥವು ಯುರೇನಿಯಂ. ಈ ಯುರೇನಿಯಂ ಪೌಂಡಿಗೆ ಹತ್ತು ಷಿಲಿಂಗುಗಳು ಅಂದರೆ ಸುಮಾರು 5 ರೂ. ಗಳು. ಈ ಯುರೇನಿಯಂನ ಒಂದು ಸಣ್ಣ ಅಣುವು ವಿಮಾನವನ್ನು ಪ್ರಪಂಚವ ಸುತ್ತಲೂ ಹಾರಿಸುವ ಶಕ್ತಿಯನ್ನು ಹೊಂದಿರುತ್ತದೆ. ಒಂದು ಪೌಂಡು ಯುರೇನಿಯಂನಲ್ಲಿ ಎಷ್ಟು ಶಕ್ತಿ ಇರುವದೆಂದರೆ 5 ಮಿಲಿಯ ಪೌಂಡು ಕಲ್ಲಿದ್ದಲ್ಲಿನ ಅಥವಾ 3 ಮಿಲಿಯ ಪೌಂಡು ಪೆಟ್ರೋಲಿನ ಶಕ್ತಿಯುಳ್ಳದ್ದಾಗಿರುತ್ತದೆ.

ಸಂಯುಕ್ತ ಸಂಸ್ಥಾನದಲ್ಲಿ ರೇಡಿಯೊ ಮತ್ತು ಪತ್ರಿಕೆಯ ಮೇಲಿನ ನಿರ್ಬಂಧವನ್ನು ವಜಾ ಮಾಡಲಾಗಿದೆ.

ಂ ಂ

ಬರ್ಲಿನ್ ನಿವಾಸಿಗಳು ತಮ್ಮಲ್ಲಿರುವ ನಿಸಿಗ ನಾಣ್ಯಗಳನ್ನೆಲ್ಲಾ ಮಿತ್ರ ಸೇನಾಧಿಕಾರಿಗೆ ೧೦ ದಿವಸದೊಳಗಾಗಿ ಒಪ್ಪಿಸಬೇಕೆಂದು ಆಜ್ಞೆ ಹೊರಟಿದೆ.

ಂ ಂ

ಪ್ರಮುಖ ನಾಜೀ ಯುದ್ಧ ತಜ್ಞೇರು ದಾಕರರ ವಿಚಾರಣೆ ಏರ್ಪಾಡನ್ನು ಪರೀಕ್ಷಿಸಲು ಅನೇರಿಕಾ, ರಷ್ಯಾ, ಇಂಗ್ಲೆಂಡ್ ಫ್ರಾನ್ಸ್ ಪ್ರತಿನಿಧಿಗಳು ನೂರೆಂಬರ್ಗಿಗೆ ಪ್ರಯಾಣ ಮಾಡಿದರು.

ಂ ಂ

ಸರ್ಕಾರದ ನೀತಿಯು ಹಿಂದುಗಳ ಹಕ್ಕು ಭಾಧ್ಯತೆಗೆ ವಿರುದ್ಧವಾಗಿದೆಯೆಂದು ಸರ್ ಗೋಕುಲ್‌ಚಂದ್ ನರಂಗರವರು ನೈಟ್ ಹುಡ್ ಪ್ರಶಸ್ತಿಯನ್ನು ವಾಪಸು ಮಾಡುವುದಾಗಿ ತಿಳಿಸಿರುವರು.

ಂ ಂ

ಪಾಂಡಿಚೇರಿ ಅರವಿಂದ ಆಶ್ರಮದಲ್ಲಿ 'ಅಮ್ಮನ' ಪ್ರಾರ್ಥನೆಯಲ್ಲಿ 'ವಿಜಯಿಗಳು ತಮ್ಮ ಮಾತಿನಂತೆ ನಡೆಯಲಿ' ಎಂದು ಹೇಳಿರವರು.

ಪ್ರಜಾಪ್ರಭುತ್ವ ಸ್ಥಾಪನೆಯಾಗಲಿ

ಹರಿಜನ ಪೌರೋಹಿತ್ಯ

ಇಂದುಮತಿ ಗೌನಾಜಿ ಮತ್ತು ಟಿಂಡಲ್ಕರರ ವಿವಾಹದಲ್ಲಿ ಮಹಾತ್ಮ ಗಾಂಧೀಜೀ ಹಾಜರಿದ್ದು ತಾವೇ ನೂತ ದಾರದಿಂದ ತಯಾರಿಸಿದ ಹಾರಗಳನ್ನು ವಧೂವರರಿಗೆ ಹಾಕಿದರು. ಈ ವಿವಾಹದಲ್ಲಿ ಪೌರೋಹಿತ್ಯವನ್ನು ನಡೆಸಿದವನು ಒಬ್ಬ ಹರಿಜನಂವನು.

ಒಟ್ಲರ್ ಮತ್ತೆ ಹುಟ್ಟಿದ್ದಾನು !

ಈಗ ಕೆಸಡಾದಲ್ಲಿರುವ ಪ್ರಸಿದ್ಧ ಜೈನಾ ತತ್ವಜ್ಞಾನಿ ಮತ್ತು ಲೇಖಕ ಡಾ| ಲಿಂ ಯು ಟಾಂಗ್ " ವಿ-ಕಾಡೋ ಚಕ್ರವರ್ತಿಯನ್ನು ಒಬ್ಬ ಬಟ್ಲರ್ ಸ್ಥಿತಿಗಿಳಿಸ ಬೇಕೆಂದೂ, ಆತನು ಮಿತ್ರ ಸೇನಾನಿಗೆ ನೀರು ಕೊಡುವುದು, ಸಿಗರೇಟನ್ನು ಹತ್ತಿಸುವುದು ಮುಂತಾವ ಕೆಲಸಗಳನ್ನು ಮಾಡಬೇಕೆಂದೂ ' ತಿಳಿಸಿರುವನು. ವಿಶ್ವರು ಜಪಾನರನ್ನು ಸರಿಯಾದ ಹಾದಿಯಲ್ಲಿಡದಿದ್ದರೆ, ೧೦ ವರ್ಷಗಳಲ್ಲಿ ಒಬ್ಬ ಜಪಾನಿ ಹಿಟ್ಲರ್ ಹೊರಬೀಳುವುದಾಗಿಯೂ ಹೇಳಿರುವರು.

ಮೈಸೂರು ಪೌರಸಭೆಯ ೫ ನೇ ಸಾಧಾರಣ ಸಭೆ ಇದೇ 25 ನೇ ತಾರೀಖು ನಡೆಯುವುದು.

ಮುಂದಿನ ಮಾಹೆ ೧೬ ರಲ್ಲಿ ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಸಭೆ ಸೇರುವುದು.

ಜಾಸನದಲ್ಲಿ ಸಂಸ್ಥಾಪಿಸಿದ ಪತ್ರಿಕೋದ್ಯೋಗಿ ಸಮ್ಮೇಳನದ ೪ ನೇ ಅಧಿವೇಶನ ನಡೆಯುವುದು.

ಗಾಂಧೀಜಿ ಪ್ರಪಂಚದ ಶ್ರೀ ಷ್ಣ ಶಾಂತ ಮೂರ್ತಿ ಒಂದು ಎಂ॥ ರಾಯ್ ವಾಕರರು ಲಂಡನ್ನಿನಲ್ಲಿ ವೇದಾಂತ ಜಗದವರು ನಡೆಸಿದ ' ಪ್ರಪಂಚ ಶಾಂತಿ ಸಮ್ಮೇಳನ ' ದಲ್ಲಿ ತಿಳಿಸಿದರು.

ಸೂಚನೆ — ಉದಾಕರ್ಮದ ಪ್ರಯುಕ್ತ ನಾಳೆ ಪತ್ರಿಕೆಗೆ ರಜಾಕೊಡಲ್ಪಟ್ಟಿದೆ. ವ್ಯವಸ್ಥಾಪಕ. ಸತ್ಯವಾದಿ.

೬೪ ನೇ ಸೆಕ್ಷನ್ ಹೋಗಲಿ

ಕಲ್ಕತ್ತಾ ಆ 19— ಒಂದು ಸಾರ್ವಜನಿಕ ಸಭೆಯಲ್ಲಿ ಫಜಲಲ್ ಹಕ್ ಮೊದಲಾದ ಮುಖಂಡರು ಮಾತನಾಡಿ, ಬಂಗಾಳಾದಲ್ಲಿ 93 ನೇ ಸೆಕ್ಷನ್ ಹೋಗಬೇಕೆಂದೂ, ಕಾಪ್ಪುಸ್ಥಿತಿಯಿಂದ ಜನರು ಗಾಬರಿಗೊಂಡಿರುವರೆಂದೂ ತಿಳಿಸಿದರು.

ಡಾ| ಅಲಗಪ್ಪ ಚೆಟ್ಟಿಯಾರ್

ಕೊಚ್ಚಿನ್ ಟೆಕ್ಸ್‌ಟೈಲ್ಸ್ ಪ್ರೈವೇಟ್ ಲಿಮಿಟೆಡ್ ಡೈರೆಕ್ಟರ್ ಡಾ॥ ಅಲಗಪ್ಪ ಚೆಟ್ಟಿಯಾರರು 1 ಲಕ್ಷ ರೂ. ವ್ಯಯದಿಂದ ಕಟ್ಟಲಿರುವ ರವಿವರ್ಮಾ ಆಸ್ಪತ್ರೆಗೆ ಹೆರಿಗೆವಾರ್ಡ್ ಮತ್ತು ಮಿಲ್ಲಿನಲ್ಲಿ ಕೆಲಸಮಾಡುವವರ ಮಕ್ಕಳನ್ನು ನೋಡಿಕೊಳ್ಳಲು ಒಂದು ಗೃಹದ ಕಟ್ಟಡದ ಅಸ್ತಿಭಾರವನ್ನು ಬ್ರಿ| ರೆಸಿಡೆಂಟರ ಪತ್ನಿಯವರು ನೇರವೇರಿಸಿ ಶ್ರೀ ಚೆಟ್ಟಿಯಾರರ ಧಾತೃತ್ವವನ್ನು ಕೊಂಡಾಡಿದರು. ಆ ಸಮಾರಂಭ ಕಾಲದಲ್ಲಿ ಶ್ರೀ ಚೆಟ್ಟಿಯಾರರು ವಿಜಯೋತ್ಸವ ಸ್ಮಾರಕಕ್ಕಾಗಿ ರೂ. 100001 ದಾನ ಮಾಡಿದರು.

ಶರಣಾಗತ ಸಮ್ಮೇಳನಕ್ಕೆ

ನ್ಯೂನಿಲಾ ಆ 19— ಇಲ್ಲಿಗೆ ಜಪಾನಿ ಶರಣಾಗತದ ಪ್ರಥಮ ಕಾರ್ಯಗಳನ್ನು ನಡೆಸಲು 16 ಮಂದಿ ಜಪಾನೀ ರಾಯಭಾರಿಗಳು ಒಂದಿರುವರು. ಇವರನ್ನು ಸಮ್ಮೇಳನ ಸ್ಥಾನಕ್ಕೆ ಸಹರೆಯಿಂದ ಕರೆದೊಯ್ಯಲಾಯಿತು. ಅಲ್ಲಿಗೆ ಪಿಸ್ತೂಲು ಹಿಡಿದುಕೊಂಡು ಹೋಗಲು ಅವಕಾಶ ಕೊಡಲ್ಪಡಲಿಲ್ಲ

ಮಹಾತ್ಮ ಗಾಂಧೀಜಿಯವರು ನಿನ್ನೆ ಬೊಂಬಾಯಿಗೆ ತಲುಪಿದರು ' ಈ ದಿವಸ ಪೂನಾಕ್ಕೆ ಹೊರಡುವರು.